

# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ

E-mail : kannadapostnews@gmail.com / ಕನ್ನಡ post

Price: ₹1

Vol.No.02 | Issue. 72 | Pages. 2 | Date: 15-02-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 72 – ಪುಟಗಳು : 2 | 15-02-2026 | ಭಾನುವಾರ | Ph: 8762954248 | ದರ : ₹1


## ನರೇಗಾ ಕಾಯ್ದೆ ಬದಲು: ದಲಿತ ಸಮುದಾಯಕ್ಕೆ ಹೊಡೆತ

### ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಕಳವಳ | ಹೊಳೆನರಸೀಪುರದಲ್ಲಿ ಸಮ್ಮಿಲನ ಸಮಾವೇಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ (ನನರೇಗಾ)ಯನ್ನು ಕೇಂದ್ರ ಸರ್ಕಾರ ಮೂಲೆಗುಂಪಾಸಿ ಹೊಸ ಕಾಯ್ದೆ ರೂಪಿಸಿದ ಪರಿಣಾಮ ಪರಿಶಿಷ್ಟ ಜಾತಿ ಹಾಗೂ ಪಂಗಡದ 19 ಕೋಟಿ ಕುಟುಂಬಗಳಿಗೆ ತೊಂದರೆಯಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹೇಳಿದರು.



ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನೌಕರರ ಸಂಘದಿಂದ ಶನಿವಾರ ಹಮ್ಮಿಕೊಂಡಿದ್ದ ನೌಕರರ ಸಮ್ಮಿಲನ ಸಮಾವೇಶ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನರೇಗಾ ಯೋಜನೆಯ ನಿಯಮಗಳನ್ನು ಬದಲಾಯಿಸುವ ಮೂಲಕ ಕೇಂದ್ರ ಸರ್ಕಾರ ಬಡಜನರ ಉದ್ಯೋಗಾವಕಾಶಗಳನ್ನು ಕಡಿತಗೊಳಿಸಿದೆ. ಎಸ್ಸಿ-ಎಸ್ಟಿ ಸಮುದಾಯದ ಸುಮಾರು 12 ಕೋಟಿ ಮಂದಿ ಉದ್ಯೋಗದ ಭರವಸೆಯಲ್ಲಿದ್ದು, 19 ಕೋಟಿ ಜನರು ಜೀವನ ನಿರ್ವಹಣೆಗೆ ಕೂಲಿ ಕೆಲಸಗಳನ್ನು ಅವಲಂಬಿಸಿದ್ದಾರೆ. ಇಂತಹ ಬಡ ಜನರ ಬದುಕಿನೊಂದಿಗೆ ಕೇಂದ್ರ ಸರ್ಕಾರ ಚೆಲ್ಲಾಟವಾಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ರಾಜಕಾರಣಿಗಳು ಹಾಗು ನೌಕರರನ್ನು ಉದ್ದೇಶಿಸಿ, ನಿಮ್ಮನ್ನು ನಂಬಿ ಕೋಟ್ಯಾನುಕೋಟಿ ಅಸಹಾಯಕ ದಲಿತರಿಗೆ ಅನ್ಯಾಯ ಮಾಡಿದ್ದೇನೆ ಎನ್ನುವಂತಾಗಬಾರದು. ಸದನದಲ್ಲಿ ಅವರ ಸಮಸ್ಯೆಗಳನ್ನು ಚರ್ಚಿಸಿ ನ್ಯಾಯ ಒದಗಿಸಬೇಕು.

ಅವರ ಆ ಮಾತಿನ ಅರ್ಥವನ್ನು ನಾವೆಲ್ಲರೂ ಅರಿತು ನಡೆಯಬೇಕು ಎಂದರು.

ಎಸ್ಸಿ-ಎಸ್ಟಿ ಸಮುದಾಯ ಘನತೆ ಮತ್ತು ಸ್ವಾಭಿಮಾನದ ಸಮುದಾಯವಾಗಿದೆ. ಅಂಬೇಡ್ಕರ್ ಅವರ ಚಿಂತನೆಗಳ ಆಧಾರದ ಮೇಲೆ ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು. ಸಮಾಜದಲ್ಲಿ ಗೊಂದಲ ಸೃಷ್ಟಿಸದೆ, ಏಕತೆ ಕಾಪಾಡಿಕೊಂಡು ಮುನ್ನಡೆಯಬೇಕು ಎಂದು ಸಲಹೆ ನೀಡಿದರು.

> “ ಸಮಾಜದಲ್ಲಿ ತಾರತಮ್ಯ ನಿವಾರಣೆಗೆ ಸಾಮಾಜಿಕ ಬಹಿಷ್ಕಾರ ವಿರೋಧಿ ಕಾಯ್ದೆ ಜಾರಿಯಲ್ಲಿದೆ. ಮೀಸಲಾತಿಗಾಗಿ ಹೋರಾಟ ನಡೆಸಬೇಕಾದ ಪರಿಸ್ಥಿತಿ ಏಕೆ ಬರುತ್ತದೆ ಎಂಬುದನ್ನು ಸಮುದಾಯ ಚಿಂತಿಸಬೇಕು. ನಮ್ಮ ಮಕ್ಕಳು ಕೂಡ ಪ್ರತಿಭಾವಂತರಾಗಿದ್ದು, ಸ್ಪರ್ಧಾತ್ಮಕವಾಗಿ ಬೆಳೆಯಬೇಕು.
>
> **– ಡಾ.ಹೆಚ್.ಸಿ.ಮಹದೇವಪ್ಪ, ಸಚಿವ**

ಶಾಸಕ ಕೆ.ಎಂ.ಶಿವಲಿಂಗೇಗೌಡ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳು ದೊರಕಬೇಕು ಎಂಬ ಆಶಯವನ್ನು ದಾಖಲಿಸಿದ್ದಾರೆ. ಬಸವಣ್ಣನವರೂ ಸಹ ಸಮಾನತೆಯ ಸಂದೇಶವನ್ನು ಸಾರಿದ್ದರು. ದಲಿತ ನೌಕರರಿಗೆ ಸರ್ಕಾರದಿಂದ ಅಗತ್ಯ ಸೌಲಭ್ಯಗಳು ಲಭ್ಯವಾಗುತ್ತಿದ್ದು, ಯಾವುದೇ ತೊಂದರೆಗಳಿಲ್ಲದೆ ಉತ್ತಮ ಜೀವನ ನಡೆಸುವ ಅವಕಾಶ ಸಿಕ್ಕಿದೆ ಎಂದು ಹೇಳಿದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ಇತರೆ ಸಮುದಾಯಗಳಿಗೆ ಅವರ ಪೂರ್ವಜರು ಆಸ್ತಿ ಬಿಟ್ಟಿದ್ದಾರೆ. ಆದರೆ ನಮ್ಮ ಸಮುದಾಯಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಕೊಟ್ಟಿರುವ ಸಂವಿಧಾನವೇ ಮಹತ್ವದ ಆಸ್ತಿ. ಶಿಕ್ಷಣವು ಹುಲಿಯ ಹಾಲಿನಂತೆ, ಅದನ್ನು ಕುಡಿದ ಬಳಿಕ ಗರ್ಜಿಸಲೇಬೇಕು ಎಂದು ಅಂಬೇಡ್ಕರ್ ಹೇಳಿದ್ದಾರೆ.

ಇಂದು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿ. ಇದೇ ರೀತಿಯ ಕಾರ್ಯಕ್ರಮಗಳನ್ನು ಹೊಳೆನರಸೀಪುರದಲ್ಲೂ ನಡೆಸಿರುವುದು ಶ್ಲಾಘನೀಯ ಎಂದು ಹೇಳಿದರು.

### ಎಸ್‌ಸಿ-ಎಸ್‌ಟಿಗೆ ನಿವೇಶನ ಸತೀಶ್ ಜಾರಕಿಹೊಳಿ

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ಪರಿಶಿಷ್ಟ ಜಾತಿ, ಪಂಗಡದ ಜನರಿಗೆ ನಿವೇಶನ ಒದಗಿಸಲು ಜಮೀನು ಖರೀದಿ ಮಾಡಿ ಲೋಕೋಪಯೋಗಿ ಇಲಾಖೆ ಮೂಲಕ ವಿತರಿಸಲು ಸರ್ಕಾರ ಒಪ್ಪಿಗೆ ನೀಡಿದೆ ಎಂದು ಹೇಳಿದರು.

ನಿವೇಶನ ನಿರ್ಮಾಣಕ್ಕೆ ಮೀಸಲಿರುವ ಹಣವನ್ನು ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಪ್ಪಿಗೆ ನೀಡಿದ್ದಾರೆ. ಹೀಗಾಗಿ ಆ ಕೆಲಸದ ಪ್ರಯತ್ನ ಮುಂದುವರೆದಿದೆ. ದೆಹಲಿಯಲ್ಲಿ 500 ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಕಲ್ಪಿಸುವ ಹಾಸ್ಟೆಲ್ ನಿರ್ಮಾಣ ಪ್ರಕ್ರಿಯೆಯೂ ಆರಂಭವಾಗಿದೆ ಎಂದು ತಿಳಿಸಿದರು.

ಎಸ್ಸಿ-ಎಸ್ಟಿ ಸಮುದಾಯಕ್ಕೆ ಮೀಸಲಾದ ಅನುದಾನ ಸಂಪೂರ್ಣ ಪ್ರಮಾಣದಲ್ಲಿ ದೊರಕಿದಾಗ ಮಾತ್ರ ಅಭಿವೃದ್ಧಿ ಸಾಧ್ಯ. ಸಂಘಟನೆಗಳ ಹೋರಾಟಗಳು ಸರಿಯಾದ ದಾರಿಯಲ್ಲಿರಬೇಕು. ನಮ್ಮ ಹಕ್ಕುಗಳನ್ನು ಪಡೆಯಲು ಜಾಣ್ಮೆ ಅಗತ್ಯ ಎಂದರು.

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಮಾತನಾಡಿದರು. ಸಂಸದ ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್, ಹೈಕೋರ್ಟ್ ಸರ್ಕಾರಿ ಅಭಿಯೋಜಿತ ವಕೀಲೆ ಸತ್ಯವತಿ, ಎಸ್ಸಿ-ಎಸ್ಟಿ ನೌಕರರ ಸಂಘದ ಸಂಚಾಲಕ ಎಸ್.ಉಮೇಶ್, ಅಧ್ಯಕ್ಷ ಬಿ.ಕೆ. ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಯತೀಶ್, ಪುರಸಭೆ ಮಾಜಿ ಅಧ್ಯಕ್ಷ ಲಕ್ಷ್ಮಣ್ ಉಪಸ್ಥಿತರಿದ್ದರು.

## ಪುತ್ರನ ಬರುವಿಕೆಗಾಗಿ ಕಾಯುತ್ತಿರುವ ತಂದೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದುದ್ದ ಹೋಬಳಿ ಜಕ್ಕೇನಹಳ್ಳಿ ಗ್ರಾಮದಲ್ಲಿ ತಂದೆಯೊಬ್ಬರು ಅನಾರೋಗ್ಯದಿಂದ ತೀವ್ರ ಬಳಲುತ್ತಿದ್ದು ಉಸಿರು ನಿಲ್ಲುವ ಮೊದಲು ಮನೆ ಬಿಟ್ಟು ಹೋಗಿರುವ ಪುತ್ರ ಬರಲಿ ಎಂದು ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.

ಗ್ರಾಮದ ಜಗದೀಶ್ ಎಂಬುವರ ಮಗ ದೀಪಕ್ ಕಳೆದ ಎರಡು ತಿಂಗಳಿಂದ ನಾಪತ್ತೆಯಾಗಿದ್ದಾನೆ. ಮಗನ ಚಿಂತೆಯಲ್ಲಿ ಹಾಸಿಗೆ ಹಿಡಿದಿರುವ ಅವರ ಆರೈಕೆಯನ್ನು ಇಳಿವಯಸ್ಸಿನ ತಾಯಿ ಸಣ್ಣಮ್ಮ ಮಾಡುತ್ತಿದ್ದಾರೆ. ಮೊಮ್ಮಗ ಮನೆ ಬಿಟ್ಟು ಹೋದಾಗ ಹತ್ತಿರದ ಠಾಣೆಗೆ ತೆರಳಿ ನಾಪತ್ತೆ ಪ್ರಕರಣ ದಾಖಲಿಸಿಲ್ಲ. ಅವರಿಗೆ ಸಲಹೆ ನೀಡಲು ಹತ್ತಿರದ ಬಂಧುಗಳಿಲ್ಲ. ಹೀಗಾಗಿ ಮೊಮ್ಮಗನ ಬರುವಿಕೆಗೆ ಸಣ್ಣಮ್ಮ ಸಹ ಕಾಯುತ್ತಲೇ ಇದ್ದಾರೆ. ಎಂಟನೇ ತರಗತಿ ವರೆಗೆ ಓದಿರುವ ದೀಪಕ್ ಹಾಸನದ ಬಿ.ಕಾಟಿಹಳ್ಳಿಯ ಕೋಳಿ ಅಂಗಡಿಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ. ಸಣ್ಣಮ್ಮ, ಜಗದೀಶ್ ಹಾಗೂ ದೀಪಕ್ ಮಾತ್ರ ಮನೆಯಲ್ಲಿದ್ದರು. ಕುಟುಂಬ ನಿರ್ವಹಣೆಗಾಗಿ ದೀಪಕ್ ಬಾಲ್ಯದಿಂದಲೂ ಹೋಟೆಲ್, ದಿನಸಿ ಅಂಗಡಿಗಳಲ್ಲಿ ಕೆಲಸ ಮಾಡಿಕೊಂಡಿದ್ದ. ಈಗ ಎರಡು ತಿಂಗಳಿಂದ ಮನೆಯಿಂದ ಹೋದವನು ವಾಪಾಸ್ ಬಂದಿಲ್ಲ. ಯಾರಿಗಾದರೂ ದೀಪಕ್‌ನ ಸುಳಿವು ಸಿಕ್ಕರೆ ಊರಿಗೆ ಕಳುಹಿಸಿಕೊಡಿ ಎಂದು ವೃದ್ಧೆ ಸಣ್ಣಮ್ಮ ಅಂಗಲಾಚಿದ್ದಾರೆ. ಯುವಕನ ಸುಳಿವು ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆ ಅಥವಾ 9900146973 ಇಲ್ಲಿಗೆ ಸಂಪರ್ಕಿಸಬಹುದು.

## ಪುಲ್ವಾಮಾ ಕಹಿ ನೆನಪು: ವೀರ ಯೋಧರಿಗೆ ಶ್ರದ್ಧಾಂಜಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಮ್ಮು ಕಾಶ್ಮೀರದ ಪುಲ್ವಾಮಾದಲ್ಲಿ 2019ರ ಫೆ. 14ರಂದು ಉಗ್ರರ ದಾಳಿಯಿಂದ ಹುತಾತ್ಮರಾದ 44 ಸಿಆರ್‌ಪಿಎಫ್ ಯೋಧರಿಗೆ ಶ್ರದ್ಧಾಂಜಲಿ ಹಾಗೂ ನಗರದ ಅರೆಸೇನಾ ಭವನಕ್ಕೆ ಒಂದು ವರ್ಷ ತುಂಬಿದ ಹಿನ್ನೆಲೆ ನಗರದಲ್ಲಿ ಅರೆಸೇನಾ ಪಡೆ ನಿವೃತ್ತ ಯೋಧರ ಒಕ್ಕೂಟದಿಂದ ಬೈಕ್ ಜಾಥಾ ಹಮ್ಮಿಕೊಳ್ಳಲಾಗಿತ್ತು.



ಒಕ್ಕೂಟದ ಜಿಲ್ಲಾಧ್ಯಕ್ಷ ಪಿ.ವಿ.ನಾಗೇಶ್ ಹಾಗೂ ಪದಾಧಿಕಾರಿಗಳ ನೇತೃತ್ವದಲ್ಲಿ ನಗರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮುಂಭಾಗದಿಂದ ಆರಂಭವಾದ ರ್‍ಯಾಲಿಯಲ್ಲಿ ನಿವೃತ್ತ ಸೈನಿಕರ ಜೊತೆಗೆ ಅವರ ಕುಟುಂಬ ಸದಸ್ಯರು, ಮಕ್ಕಳೂ ಭಾಗಿಯಾಗಿ ಅಗಲಿದ ಯೋಧರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಕೆಲವು ಸೇನಾ ಸಮವಸ್ತ್ರಧರಿಸಿ, ರಾಷ್ಟ್ರಧ್ವಜ ಹಿಡಿದು ಗಮನ ಸೆಳೆದರು.

ಡೇರಿ ವೃತ್ತದ ಬಳಿಯಿಂದ ಹೊರಟ ರ್‍ಯಾಲಿಯು, ರಿಂಗ್ ರಸ್ತೆ, ಸುಬೇದಾರ್ ನಾಗೇಶ್ ವೃತ್ತ, ಸಾಲಗಾಮೆ ರಸ್ತೆ, ಸಹ್ಯಾದ್ರಿ ಸರ್ಕಲ್, ಹೇಮಾವತಿ ಪ್ರತಿಮೆ, ಎನ್.ಆರ್. ವೃತ್ತ, ಬಿಎಂ ರಸ್ತೆ, ರೈಲ್ವೆ ನಿಲ್ದಾಣ ಮುಂಭಾಗ, ಡೇರಿ ವೃತ್ತದ ಮೂಲಕ ಕೆಂಚಟ್ಟಹಳ್ಳಿಯಲ್ಲಿರುವ ಅರೆಸೇನಾ ಪಡೆಯ ಭವನದ ಬಳಿಗೆ ತೆರಳಿ ಕೊನೆಗೊಂಡಿತು. ಆಗಮಿಸಿದ್ದ ಎಲ್ಲರಿಗೂ ಅಲ್ಲೇ ಊಟದ ವ್ಯವಸ್ಥೆ ಮಾಡಲಾಗಿತ್ತು.

ಈ ವೇಳೆ ಮಾತನಾಡಿದ ನಾಗೇಶ್ ಹಾಗೂ ಇತರರು, ಸಿಆರ್‌ಪಿಎಫ್‌ನ 44 ಮಂದಿ ಯೋಧರು ಹುತಾತ್ಮರಾಗಿ 7 ವರ್ಷ ತುಂಬಿದೆ. ಹಾಗೆಯೇ ರಾಜ್ಯದಲ್ಲೇ ಮೊದಲ ಬಾರಿಗೆ ಹಾಸನದಲ್ಲಿ ಅರೆಸೇನಾ ಭವನ ನಿರ್ಮಾಣಗೊಂಡು 1 ವರ್ಷ ಕಳೆದಿದೆ. ಇದರ ಸ್ಮರಣಾರ್ಥ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದರು.

ನಮ್ಮವೂ ಕೆಲ ಬೇಡಿಕೆ ಇದ್ದು, ಈಗಾಗಲೇ ಸರ್ಕಾರದ ಮುಂದೆ ಇಡಲಾಗಿದೆ. ಈಡೇರಿಸುವ ವಿಶ್ವಾಸವಿದೆ ಎಂದ ಅವರು, ಮುಂದಿನ ದಿನಗಳಲ್ಲಿ ನಮ್ಮ ಒಕ್ಕೂಟದಿಂದ ವಿವಿಧ ರೀತಿಯ ಸಮಾಜ ಸೇವೆಯಲ್ಲೂ ತೊಡಗಿಸಿಕೊಳ್ಳುವುದಾಗಿ ತಿಳಿಸಿದರು.

ರ್‍ಯಾಲಿಯಲ್ಲಿ ಉಪಾಧ್ಯಕ್ಷರಾದ ಎಂ.ಜಿ.ರಮೇಶ್, ನಾರಾಯಣಪ್ಪ, ನಾಗಪ್ಪ, ಕಾರ್ಯದರ್ಶಿ ಹೆಚ್.ಆರ್. ವಿಜಯಕುಮಾರ್, ಹೆಚ್.ಕುಮಾರ್ ಮತ್ತಿತರರಿದ್ದರು.

## ದಿಡಗದಲ್ಲಿ ರಾಗಿ ಖರೀದಿ ಕೇಂದ್ರ: ಜಿಲ್ಲಾಡಳಿತಕ್ಕೆ ಪ್ರಸ್ತಾವನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಬೆಂಬಲ ಬೆಲೆಯಡಿ ರಾಗಿ ಖರೀದಿಸಲು ತಾಲ್ಲೂಕಿನಲ್ಲಿ 6 ಖರೀದಿ ಕೇಂದ್ರ ತೆರೆಯಲಾಗಿದೆ. ದಿಡಗದಲ್ಲೂ ಕೇಂದ್ರದ ಅವಶ್ಯಕತೆಯಿದೆ. ಜಿಲ್ಲಾಧಿಕಾರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆಯೆಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.



ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ಶನಿವಾರ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ವತಿಯಿಂದ 2025-26ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ನೇರವಾಗಿ ರಾಗಿ ಖರೀದಿಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿ, ತಾಲ್ಲೂಕಿನ ಗಡಿ ಭಾಗದ ರೈತರ ಅನುಕೂಲಕ್ಕಾಗಿ ದಿಡಗ ಗ್ರಾಮದಲ್ಲಿ ಖರೀದಿ ಕೇಂದ್ರ ತೆರೆಯಲು ಮನವಿ ಸಲ್ಲಿಸಲಾಗಿದೆ. ಜಿಲ್ಲಾಧಿಕಾರಿ ಅವರು ರೈತರ ಸಮಸ್ಯೆಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಖರೀದಿ ಕೇಂದ್ರ ತೆರೆಯಲು ಕ್ರಮ ಕೈಗೊಳ್ಳಲಾಗುವುದು, ಪ್ರಸಕ್ತ ವರ್ಷ ಒಳ್ಳೆಯ ಬೆಲೆಯನ್ನು ಸರ್ಕಾರ ನಿಗದಿಪಡಿಸಿ ರಾಗಿ ಖರೀದಿಸುತ್ತಿದೆ ಎಂದರು.

ರೈತರಿಂದ ನೇರವಾಗಿ ಖರೀದಿಸಿ ಅದರ ಹಣವನ್ನು ಯಾವ ಮಧ್ಯವರ್ತಿಗೆ ಆಸ್ಪದ ನೀಡದೇ ರೈತರ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ನೇರವಾಗಿ ಸಂದಾಯ ಮಾಡಲಾಗುತ್ತದೆ. ರೈತರು ರಾಗಿ ಖರೀದಿ ಕೇಂದ್ರಕ್ಕೆ ಗುಣಮಟ್ಟದ ರಾಗಿಯನ್ನು ಸರಬರಾಜು ಮಾಡಲು ಆದ್ಯತೆ ನೀಡಬೇಕು. ತಾಲ್ಲೂಕಿನಲ್ಲಿ ಖರೀದಿಯಾದ ರಾಗಿಯನ್ನು ಸ್ಥಳೀಯ ಪಡಿತರ ವಿತರಣಾ ವ್ಯವಸ್ಥೆ ಮೂಲಕವೇ ವಿತರಿಸಲಾಗುತ್ತದೆ. ಸಾರ್ವಜನಿಕ ಉಪಯೋಗಕ್ಕೆ ಬರುವ ರಾಗಿ ಶುದ್ಧವಾಗಿರುವಂತೆ ಅಧಿಕಾರಿಗಳು ವಿಶೇಷ ಗಮನ ಹರಿಸಬೇಕೆಂದರು.

2025-26ನೇ ಸಾಲಿನ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಾಲ್ ರಾಗಿಗೆ 4886 ರೂ. ನಿಗದಿಪಡಿಸಲಾಗಿದೆ. ಪ್ರತಿ ರೈತರಿಂದ ಒಂದು ಎಕರೆಗೆ 10 ಕ್ವಿಂಟಾಲ್‌ನಂತೆ ಗರಿಷ್ಟ 50 ಕ್ವಿಂಟಾಲ್ ಮೀರದಂತೆ ನೊಂದಣಿ ಮಾಡಿಕೊಂಡಿರುವ 14,435 ರೈತರಿಂದ 3,39,388 ಕ್ವಿಂಟಾಲ್ ಗುಣಮಟ್ಟದ ರಾಗಿ ಖರೀದಿಸಲಾಗುವುದೆಂದರು.

ಈಗಾಗಲೇ ರೈತರು ರಾಗಿ ಪೂರೈಕೆಗೆ ನೋಂದಣಿ ಮಾಡಿಸಿಕೊಂಡಿದ್ದಾರೆ ಖರೀದಿ ಕೇಂದ್ರದಲ್ಲಿ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ. ನೋಂದಣಿ ಮಾಡಿಕೊಂಡಿರುವ ಎಲ್ಲಾ ರೈತರ ರಾಗಿ ಖರೀದಿ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಶಿವಣ್ಣ, ಕಾರ್ಯದರ್ಶಿ ಸೋಮಶೇಖರ್, ಅಧ್ಯಕ್ಷ ವೆಂಕಟೇಶ್ ಮೂರ್ತಿ, ನಿರ್ದೇಶಕ ರಮೇಶ್ ಕುಂಬಾರಹಳ್ಳಿ, ಎಂ.ಆರ್. ಅನಿಲ್ ಕುಮಾರ್, ಮುಖಂಡರಾದ ಬೋರೇಗೌಡ, ಮೂಡನಳ್ಳಿ, ಚಂದ್ರಣ್ಣ, ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಜಿಲ್ಲಾ ವ್ಯವಸ್ಥಾಪಕಿ ಅನುರಾಧ, ತಾಲ್ಲೂಕು ಆಹಾರ ಶಿರಸ್ತೆದಾರ್ ಹೇಮಂತ್ ಕುಮಾರ್ ಇತರರಿದ್ದರು.

## ಪ್ರತ್ಯೇಕ ಅಪಘಾತ ಇಬ್ಬರು ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಪರಿಚಿತ ವಾಹನ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ಕಾರೆಕೆರೆ ಪೆಟ್ರೋಲ್ ಬಂಕ್ ಸಮೀಪ ನಡೆದಿದೆ.

ದುದ್ದ ಹೋಬಳಿ ಹಾರನಹಳ್ಳಿ ಗ್ರಾಮದ ಮಂಜೇಗೌಡ (59) ಮೃತರು. ಫೆ. 12ರ ರಾತ್ರಿ 10.30ರ ಸಮಯದಲ್ಲಿ ರಸ್ತೆಬದಿ ನಡೆದುಕೊಂಡು ಹೋಗುತ್ತಿದ್ದಾಗ ಅಪರಿಚಿತ ವಾಹನ ಡಿಕ್ಕಿಯಾಗಿದೆ. ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಬೈಕ್ ಡಿಕ್ಕಿಯಾಗಿ ಮತ್ತೊಂದು ಬೈಕ್‌ನ ಸವಾರ ಮೃತಪಟ್ಟು ಮತ್ತೊಬ್ಬ ಗಂಭೀರ ಗಾಯಗೊಂಡಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕಿನ ಕೆ.ಕಾಳೇನಹಳ್ಳಿ ಗೇಟ್ ಸಮೀಪ ನಡೆದಿದೆ. ಹೊಳೆನರಸೀಪುರ ತಾಲ್ಲೂಕು ವಳಂಬಿಗೆ ಗ್ರಾಮದ ರಾಜೇಗೌಡ ಮೃತರು.

ರಾಜೇಗೌಡ ಮತ್ತು ಚಂದ್ರೇಗೌಡ ಅವರು ಸಂಬಂಧಿಕರ ತಿಥಿ ಕಾರ್ಯಕ್ಕಾಗಿ ಶ್ರವಣೇರಿಗೆ ಬಂದಿದ್ದರು. ಊಟ ಮುಗಿಸಿ ಊರಿಗೆ ವಾಪಾಸ್ಸಾಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಕೆಟಿಎಂ ಬೈಕ್ ಸವಾರ ಡಿಕ್ಕಿ ಮಾಡಿದ್ದಾನೆ. ಗಂಭೀರ ಗಾಯಗೊಂಡಿದ್ದ ಇಬ್ಬರನ್ನು ಹಾಸನದ ಹಿಮ್ಸ್‌ಗೆ ದಾಖಲಿಸಲಾಗಿತ್ತು. ಆದರೆ ರಾಜೇಗೌಡ ಅವರನ್ನು ಪ್ರಾಣಾಪಾಯದಿಂದ ಪಾರು ಮಾಡಲು ಸಾಧ್ಯವಾಗಿಲ್ಲ. ಚನ್ನರಾಯಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮದುವೆಗೆ ಹೋದ ಮಹಿಳೆ ನಿಗೂಢ ನಾಪತ್ತೆ

### ಕಲ್ಕೆರೆ ಬಳಿ ಬಟ್ಟೆ, ವ್ಯಾನಿಟಿ ಬ್ಯಾಗ್ ಪತ್ತೆ: ಚಿನ್ನಾಭರಣಕ್ಕಾಗಿ ಕೊಲೆ ಶಂಕೆ?

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ವಿವಾಹ ಸಮಾರಂಭಕ್ಕೆ ಬಂದಿದ್ದ ಮಹಿಳೆಯೊಬ್ಬರ ಬಟ್ಟೆ, ಚಪ್ಪಲಿ ಹಾಗೂ ವ್ಯಾನಿಟಿ ಬ್ಯಾಗ್ ತಾಲೂಕಿನ ಕಲ್ಕೆರೆ ಗ್ರಾಮದ ಬಳಿ ಪತ್ತೆಯಾಗಿದ್ದು, ಯಾರೋ ಕೊಲೆ ಮಾಡಿ ಶವವನ್ನು ಕೆರೆಗೆ ಎಸೆದಿರಬಹುದು ಎಂಬ ಸಂಶಯ ವ್ಯಕ್ತವಾಗಿದೆ. ಮಹಿಳೆ ಕೊರಳಲ್ಲಿ 30 ಲಕ್ಷ ರೂ. ಚಿನ್ನಾಭರಣ ಧರಿಸಿದ್ದರು.

ತುಮಕೂರು ಜಿಲ್ಲೆ ಕುಣಿಗಲ್ ತಾಲೂಕಿನ ಯಲಿಯೂರು ಗ್ರಾಮದಿಂದ ಗುರುವಾರ ಮದುವೆಗೆ ಬಂದಿದ್ದ ಪ್ರಿಯಾಂಕ (29) ಬೇಲೂರು ತಾಲೂಕಿನ ಮತ್ತಾವರ ಗ್ರಾಮದಿಂದ ನಾಪತ್ತೆಯಾಗಿದ್ದಾರೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನಿತ್ವಾ, ಸೋಕೋ ತಂಡ, ಶ್ವಾನದಳ ತಂಡ ಆಗಮಿಸಿ ಪರಿಶೀಲನೆ ನಡೆಸಿದೆ. ಕುಣಿಗಲ್ ತಾಲ್ಲೂಕಿನ ಯಲಿಯೂರು ಗ್ರಾಮದ ರುದ್ರೇಶ್ ಅವರೊಂದಿಗೆ ವಿವಾಹ ಮಾಡಿಕೊಡಲಾಗಿತ್ತು. ಫೆ.12ರಂದು ಚಿಕ್ಕಮಗಳೂರಿನ ಮದುವೆ ಕಾರ್ಯಕ್ರಮಕ್ಕೆ ಪ್ರಿಯಾಂಕ ಆಗಮಿಸಿದ್ದರು. ಮದುವೆ ಮುಗಿಸಿ ತವರು ಮನೆ ಮತ್ತಾವರಕ್ಕೆ ಬಂದು ನಂತರ ತಾಯಿ ಜೊತೆ ಕೈಮರ ಗ್ರಾಮಕ್ಕೆ ಬಂದು ಬೇಲೂರಿಗೆ ಬಸ್ ಹತ್ತಿದ್ದಾರೆ. ಬಳಿಕ ಬೇಲೂರಿನಲ್ಲಿ ಬಸ್ ಇಳಿದು ತನ್ನ ಚಿಕ್ಕಮ್ಮ ಸೌಮ್ಯಾ ಅವರಿಗೆ ಕರೆ ಮಾಡಿ ಪರಿಚಯಸ್ಥರು ಸಿಕ್ಕಿದ್ದಾರೆ. ಅವರ ಜೊತೆ ಹೋಗುತ್ತಿದ್ದೇನೆ ಎಂದು ಹೇಳಿದ್ದಾರೆ. ಇದಕ್ಕೂ ಮೊದಲು ಪತಿ ರುದ್ರೇಶ್‌ಗೂ ಕರೆ ಮಾಡಿದ್ದ ಪ್ರಿಯಾಂಕ ಕುಣಿಗಲ್‌ಗೆ ಬಂದು ಕರೆದುಕೊಂಡು ಹೋಗಿ ಎಂದಿದ್ದರಂತೆ. ಆದಾದ ಬಳಿಕ ಸೌಮ್ಯ ರಾತ್ರಿ 8:30ರ ಸಮಯದಲ್ಲಿ ಪ್ರಿಯಾಂಕಗೆ ಕರೆ ಮಾಡಿದ್ದು, ಫೋನ್ ಸ್ವಿಚ್ಡ್‌ಆಫ್ ಆಗಿದೆ.

ಶನಿವಾರ ಬೆಳಿಗ್ಗೆ ಮತ್ತೆ ಪ್ರಿಯಾಂಕ ಪತಿ ಮನೆಯವರು ಕಲ್ಕೆರೆ ಬಳಿ ಬಂದು ಹುಡುಕಾಟ ನಡೆಸಿದಾಗ ಒಳಉಡುಪು, ಒಂದು ಚಪ್ಪಲಿ ಸಿಕ್ಕಿದೆ. ಅದರಿಂದ ಸ್ವಲ್ಪ ದೂರದಲ್ಲೇ ವ್ಯಾನಿಟಿ ಬ್ಯಾಗ್ ಬಿದ್ದಿದ್ದು ಪ್ರಿಯಾಂಕ ಕಣ್ಮರೆಯಾಗಿರುವ ಬಗ್ಗೆ ಹಲವು ಅನುಮಾನಗಳು ಹುಟ್ಟಿಕೊಂಡಿವೆ. ಪ್ರಿಯಾಂಕ ಮೊಬೈಲ್ ಕಡೆಯದಾಗಿ ಕಲ್ಕೆರೆ ಸಮೀಪವೇ ಸ್ವಿಚ್ ಆಫ್ ಆಗಿದ್ದು, ಆ ಮಾರ್ಗದ ಎಲ್ಲಾ ಸಿಸಿಟಿವಿಗಳ ಪರಿಶೀಲನೆ ನಡೆಸುತ್ತಿದ್ದಾರೆ. ಪ್ರಿಯಾಂಕ ದಿಢೀರ್ ಕಣ್ಮರೆಯಿಂದ ಕುಟುಂಬಸ್ಥರಲ್ಲಿ ಆತಂಕ ಮನೆ ಮಾಡಿದೆ. ಪೊಲೀಸರು, ಅಗ್ನಿಶಾಮಕ ತಂಡ ಬೆಳಿಗ್ಗೆಯಿಂದ ಸಂಜೆವರೆಗೂ ಕೆರೆಯಲ್ಲಿ ಹುಡುಕಾಟ ನಡೆಸಿದರೂ ಕಾಣೆಯಾದ ಮಹಿಳೆಯ ಸುಳಿವು ಪತ್ತೆಯಾಗಲಿಲ್ಲ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಮಾತನಾಡಿ, ಪ್ರಿಯಾಂಕ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆಕೆಯ ಬಟ್ಟೆ, ವಸ್ತುಗಳು ಸಿಕ್ಕಿವೆ. ಪತ್ತೆ ಹಚ್ಚಲು ತಾಂತ್ರಿಕ ವಿವರಗಳನ್ನು ಕಲೆಹಾಕಿ ಶೋಧ ನಡೆಸಲಾಗುತ್ತಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಳ್ಳಲು ಅಲೆದಾಡಿಸಿದ್ದಾರೆ ಎಂಬ ದೂರಿಗೆ ಸಂಬಂಧಿಸಿದಂತೆ ಲೋಪವಾಗಿದ್ದರೆ ಕ್ರಮ ಕೈಗೊಳ್ಳಲಾಗುವುದು ಎಂದರು.

## ಹಳೇಬೀಡಿನಲ್ಲಿ ನಮನ್ ನಶಾ ಮುಕ್ತ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಮದ್ಯಪಾನ ಹಾಗೂ ಮಾದಕ ವಸ್ತು ಬಳಕೆಯಿಂದಾಗುವ ದುಷ್ಪರಿಣಾಮ, ಮಾನಸಿಕ ಆರೋಗ್ಯ ಕುರಿತು ಜಾಗೃತಿ ಮೂಡಿಸಲು ನಮನ್ ನಶಾ ಮುಕ್ತ ಶಿಬಿರ ಆಯೋಜಿಸಲಾಗಿದೆ ಎಂದು ಮನೋತಜ್ಞೆ ಡಾ. ತೇಜೋವತಿ ಹೇಳಿದರು.



ನಿಮ್ಹಾನ್ಸ್, ಆಶ್ರಯ ಹರ್ಷ ಟ್ರಸ್ಟ್, ರಾಷ್ಟ್ರೀಯ ಆರೋಗ್ಯ ಮಿಷನ್ ಹಾಗೂ ಹಳೇಬೀಡು ಸಮುದಾಯ ಆರೋಗ್ಯ ಕೇಂದ್ರದಿಂದ ಸಮಗ್ರ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಉಡಸಲಮ್ಮ ದೇವಾಲಯ ಆವರಣದಲ್ಲಿ ಹಮ್ಮಿಕೊಂಡಿದ್ದ ನಮನ್ ನಶಾ ಮುಕ್ತ ಶಿಬಿರದಲ್ಲಿ ಮಾತನಾಡಿದರು.

ವ್ಯಸನದಿಂದ ಬಳಲುವ ವ್ಯಕ್ತಿಗಳು ಹಾಗೂ ಕುಟುಂಬಗಳಿಗೆ ಸಮಾಲೋಚನೆ ನಡೆಸಲಾಗುವುದು. ವ್ಯಸನಿಗಳ ಆರೋಗ್ಯ ಪರೀಕ್ಷೆ ನಡೆಸಿ, ವೈದ್ಯಕೀಯ ಸಲಹೆ ಮತ್ತು ಚಿಕಿತ್ಸೆ ನೀಡಲಾಗುವುದು. ಅವರು ಸಂಪರ್ಕದಲ್ಲಿದ್ದು, ಸೇವೆಗಳನ್ನು ನೀಡಲಾಗುವುದು ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಸ್.ಸಿ.ವಿರೂಪಾಕ್ಷ ಮಾತನಾಡಿ, ದುಶ್ಚಟಗಳಿಗೆ ಬಲಿಯಾದವರು ಮಾನಸಿಕವಾಗಿ ಸಮಸ್ಯೆ ಎದುರಿಸಬೇಕಾಗುತ್ತದೆ. ಅಲ್ಲದೆ ಸಂಪೂರ್ಣ ಕುಟುಂಬದ ನೆಮ್ಮದಿ ಹಾಳಾಗುತ್ತದೆ ಎಂಬುದನ್ನು ಎಲ್ಲರೂ ಅರಿಯಬೇಕು ಎಂದರು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಹಕ್ಯಣ್ಣ ಕುಮಾರ್ ಮಾತನಾಡಿ, ಮಾನಸಿಕವಾಗಿ ಸದೃಢರಾದವರು ಜೀವನದಲ್ಲಿ ಏನಾನ್ನಾದರೂ ಸಾಧಿಸಬಹುದು. ವ್ಯಸನಗಳ ದಾಸರಾಗದೆ, ಉತ್ತಮ ಜೀವನ ಸಾಗಿಸಿದರೆ ಸಮಾಜದಲ್ಲಿ ಗೌರವ ಸಂಪಾದಿಸಬಹುದು ಎಂದರು.

78 ಮಂದಿಗೆ ಆರೋಗ್ಯ ತಪಾಸಣೆ ನಡೆಸಿ, ಉಚಿತ ಔಷಧಿ ಹಾಗೂ ಮಾತ್ರೆ ವಿತರಿಸಲಾಯಿತು. ಮನೋವೈದ್ಯ ಡಾ. ಪ್ರಶಾಂತ್ ಷಾ, ಹಿರಿಯ ಆರೋಗ್ಯ ಸುರಕ್ಷಣಾಧಿಕಾರಿ ಶೈಲಜಾ, ಸಮುದಾಯ ಆರೋಗ್ಯ ಕಾರ್ಯಕರ್ತರಾದ ದಿವ್ಯಾಶ್ರೀ, ಪುನಿತ್, ದಿವ್ಯಾ, ವಿನುತಾ, ಅಪೂರ್ವ, ನಿರಂಜನ್, ಆಶಾ ಕಾರ್ಯಕರ್ತೆಯರಾದ ಹೆಚ್. ಆರ್.ಪುಷ್ಪಾ, ದಾಕ್ಷಾಯಿಣಿ, ವಸಂತಾ, ನಾಗರತ್ನ ಮತ್ತಿತರರಿದ್ದರು.

# ಖಾಸಗಿ ಶಿಕ್ಷಣ ಸಂಸ್ಥೆ ವಿರುದ್ಧ ಜಾಗ ಒತ್ತುವರಿ ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು : ಪಟ್ಟಣದ ಕ್ರಿಸ್ತಜ್ಯೋತಿ ಶಾಲೆಯ ಆಡಳಿತ ಮಂಡಳಿ ಕೆಲ್ಲೂರು ಗ್ರಾಮದ ಸರ್ಕಾರಿ ಕೆರೆಯ ಜಾಗ ಮತ್ತು ಸಾರ್ವಜನಿಕ ಏರಿಯನ್ನು ದುರ್ಬಳಕೆ ಮಾಡಿಕೊಂಡಿದ್ದು, ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಪಂಚಾಯಿತಿ ಕೆಡಿಪಿ ಮಾಜಿ ಸದಸ್ಯ ಶಶಿಕುಮಾರ್ ಆಗ್ರಹಿದರು. ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೆಲ್ಲೂರು ಗ್ರಾಮದ ಸರ್ವೆ ನಂಬರ್ 45ರಲ್ಲಿ ಸುಮಾರು 3 ಎಕರೆ 4 ಗುಂಟೆ ವಿಸ್ತೀರ್ಣದಲ್ಲಿ ಕೆರೆಯ (ಮಗೆಯುವ ಕೆರೆ) ಜಾಗವಿದ್ದು, ಈ ಖಾಸಗಿ ಶಾಲೆ ಆರಂಭಗೊಂಡ ಮೇಲೆ ಪ್ರತಿ ವರ್ಷವೂ ಹಂತ ಹಂತವಾಗಿ ಒತ್ತುವರಿಯಾಗಿ ಅವಸಾನದ ಹಂಚಿಗೆ ತಲುಪಿದೆ. ಕೆರೆಯ ಎರಡು ಭಾಗದಲ್ಲಿ ಕ್ರಿಸ್ತಜ್ಯೋತಿ ಶಾಲೆಗೆ ಸೇರಿದ ಜಮೀನು ಇದೆ. ಈ ಸಲುವಾಗಿ ಕಾಂಪೌಡ್ ನಿರ್ಮಾಣ, ರಸ್ತೆ ಹಾಗೂ ವಾಹನ ನಿಲುಗಡೆ ಸಲುವಾಗಿ ಕೆರೆಯ ಜಾಗವನ್ನು ಒತ್ತುವರಿಮಾಡುತ್ತಿರುವುದು ಕಂಡುಬಂದಿದೆ ಎಂದು ಆರೋಪಿಸಿದ್ದಾರೆ.

ಈ ಕೆರೆಯೂ ತುಂಬಾ ಪುರಾತನವಾಗಿದ್ದು ನಮ್ಮ ಗ್ರಾಮದ ಪೂರ್ವಿಕರೆಲ್ಲರೂ ಅಲ್ಲಿಗೆ ಹೋಗಿ ಈ ಹಿಂದೆ ಕುಡಿಯಲು ನೀರನ್ನು ತರುತ್ತಿದ್ದರು ಎಂಬ ಇತಿಹಾಸವಿದೆ. ಈಗ ಆ ಕೆರೆಯು ತುಂಬಾ ಗಲೀಜು ಆಗಿದ್ದು ಯಾವುದಕ್ಕೂ ಉಪಯೋಗವಿಲ್ಲದೆ ತುಂಬಾ ಕೊಳಕು ಆಗಿರುತ್ತದೆ. ಅದರ ಪಕ್ಕ ಇರುವ ಕ್ರಿಸ್ತ ಜ್ಯೋತಿ ಶಾಲೆಯವರು ಆ ಕೆರೆಯನ್ನು ಒತ್ತುವರಿ ಮಾಡುತ್ತಿರುವುದಲ್ಲದೇ ಅನಗತ್ಯ ತ್ಯಾಜ್ಯವನ್ನು ಹಾಕುವುದು ಕಂಡುಬಂದಿದೆ. ಹಾಲಿ ಕೆರೆಯ ನೀರು ಸಂಪೂರ್ಣವಾಗಿ ಮಲೀನಗೊಂಡಿದೆ. ಹೀಗಿದ್ದರೂ ಕೂಡ ಕೆರೆ ಅಚ್ಚುಕಟ್ಟು ಪ್ರದೇಶದಲ್ಲಿ ಇದೇ ನೀರನ್ನು ಬಳಕೆ ಮಾಡಿಕೊಂಡು ಭತ್ತ, ಇತರೆ ಕೃಷಿಯನ್ನು ಕೈಗೊಳ್ಳುತ್ತಿದ್ದಾರೆ ಎಂದು ದೂರಿದರು.

ಈ ಖಾಸಗಿ ಶಾಲೆದ ವೇಳೆ ಮಕ್ಕಳು ಕೆರೆ ಏರಿ ಮೇಲೆ ನಡೆದು ಹೋಗುತ್ತಿದ್ದರು. ಆಗ ಕೆರೆ ಏರಿ ಕಿರಿದಾಗಿತ್ತು.

ಹಾಲಿ ಸಾವಿರಕ್ಕೂ ಅಧಿಕ ಮಕ್ಕಳು ಓದುತ್ತಿದ್ದು, ಹತ್ತಾರು ಬಸ್‌ಗಳನ್ನು ಹೊಂದಲಾಗಿದೆ. ಈ ಸಲುವಾಗಿ 8 ಅಡಿ ಅಗಲವಿದ್ದ ಕೆರೆ ಏರಿ ಈಗ 20 ಅಡಿ ಅಗಲವನ್ನು ಹೊಂದಿದೆ. ಇದರಿಂದಲೇ ಕೆರೆ ಜಾಗ ಸುಮಾರು ಒಂದು ಎಕರೆ ವಿಸ್ತೀರ್ಣ ರಸ್ತೆಗೆ ಬಳಕೆ ಮಾಡಿಕೊಂಡಿರುವ ಅನುಮಾನವಿದೆ. ಅಲ್ಲದೆ ಶಾಲೆಗೆ ತೆರಳುವ ಸಲುವಾಗಿ ಕೋಡಿಯಲ್ಲಿ ಅವೈಜ್ಞಾನಿಕ ಸೇತುವೆ ನಿರ್ಮಿಸಿರುವ ಪರಿಣಾಮ ಅರ್ಧಕೆರೆಯ ನೀರು ಅನವಶ್ಯವಾಗಿ ಪೋಲಾಗುತ್ತಿದೆ. ಇದರಿಂದ ಅಚ್ಚುಕಟ್ಟುದಾರರಿಗೆ ತೊಂದರೆಯಾಗುತ್ತಿದೆ.

ಈ ಶಾಲೆಯಲ್ಲಿ ಬಡ ಮಕ್ಕಳಿಗೆ ಉಚಿತವಾಗಿ ಪ್ರವೇಶ ದೊರೆಯುತ್ತಿಲ್ಲ. ವಾರ್ಷಿಕವಾಗಿ ಒಂದು ಮಗುವಿಗೆ ಕನಿಷ್ಠ 60 ಸಾವಿರ ರೂ. ವಸೂಲಿ ಮಾಡಲಾಗುತ್ತಿದೆ. ಕೆಲ್ಲೂರು ಗ್ರಾಮದಲ್ಲಿ ಇರುವವರೆಲ್ಲರೂ ಕೂಡ ಬಡವರೇ ಆಗಿದ್ದಾರೆ.

ಒಬ್ಬರಿಗೂ ಕೂಡ ಉಚಿತವಾಗಿ ಪ್ರವೇಶ ನೀಡಿಲ್ಲ. ಕೆಲ್ಲೂರು ಗ್ರಾಮದ ಕೆರೆ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕೆರೆಯು ಅರಕಲಗೂಡು ಪಟ್ಟಣಕ್ಕೆ ಸೇರಿದಾಗಿದ್ದು ಸ್ಥಳೀಯ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ಕೆರೆ ಸ್ವಚ್ಛತೆ ಬಗ್ಗೆ ಯೋಜನೆ ರೂಪಿಸಿ ಅನುಷ್ಠಾನಕ್ಕೆ ತರಬೇಕಿದೆ. ಇದಕ್ಕೂ ಮುನ್ನಾ ತಹಸೀಲ್ದಾರ್ ಅವರು ಸ್ಥಳಕ್ಕೆ ಭೇಟಿ ನೀಡಿ ಕೆರೆ ಒತ್ತುವರಿಯನ್ನು ಕೂಡಲೇ ಬಿಡಿಸಬೇಕು. ಇದಲ್ಲದೇ ಸರ್ವೆ ನಂಬರ್ ಜಾಗದಲ್ಲಿ ಶಾಲೆಯನ್ನು ತೆರೆಯಲು ಶಿಕ್ಷಣ ಇಲಾಖೆ ಅನುಮತಿ ನೀಡಿರುವುದು ಕೂಡ ಅಕ್ಷಮ್ಯ ಅಪರಾಧವಾಗಿದೆ. ಒಂದು ಕಡೆ ಆಳವಾದ ಕೆರೆ ಮತ್ತೊಂದು ಕಡೆ ತಗ್ಗು ಪ್ರದೇಶದಲ್ಲಿನ ಅಚ್ಚುಕಟ್ಟು ಪ್ರದೇಶವಿದೆ. ಈ ನಡುವೆ ಶಾಲಾ ಬಸ್, ಖಾಸಗಿ ವಾಹನಗಳ ಸಂಚಾರ ಮತ್ತು ಇದರೊಂದಿಗೆ ಮಕ್ಕಳ ಓಡಾಟ, ಇದನ್ನು ಕಂಡರೆ ಭಯವಾಗುತ್ತದೆ. ತುಂಬಾ ಅಪಾಯದಲ್ಲಿ ಶಾಲಾ ಮಕ್ಕಳು ಸಂಚರಿಸುತ್ತಾರೆ. ಮಕ್ಕಳ ಹಿತದೃಷ್ಟಿ ಮತ್ತು ಸರ್ಕಾರಿ ಕೆರೆ ಸಂರಕ್ಷಣೆ ಸಲುವಾಗಿ ಕ್ರಿಸ್ತಜ್ಯೋತಿ ಶಾಲೆಯ ಮಾನ್ಯತೆಯನ್ನು ಮತ್ತೊಮ್ಮೆ ಪರಿಶೀಲನೆ ನಡೆಸಬೇಕೆಂದು ಅವರು ಮನವಿ ಮಾಡಿದ್ದಾರೆ.

## ಭಾನುವಾರದ ಚಿಂತನೆ

**ಒಮ್ಮೆ 10,000 ಕಿಕ್‌ಗಳನ್ನು ಅಭ್ಯಾಸ ಮಾಡಿದವನಿಗಿಂತ, ಒಂದೇ ಕಿಕ್ ಅನ್ನು 10,000 ಬಾರಿ ಅಭ್ಯಾಸ ಮಾಡಿದವನಿಗೆ ನಾನು ಹೆಚ್ಚು ಭಯಪಡುತ್ತೇನೆ -ಬ್ರೂಸ್ ಲೀ**

ಈ ಸಂದೇಶವು ನಿರಂತರ ಅಭ್ಯಾಸ,ಶಿಸ್ತು ಮತ್ತು ಏಕಾಗ್ರತೆಯ ಮಹತ್ವವನ್ನು ಒತ್ತಿಹೇಳುತ್ತದೆ. ಅನೇಕ ವಿಷಯಗಳನ್ನು ಮೇಲ್ಮಟ್ಟದಲ್ಲಿ ತಿಳಿಯುವುದಕ್ಕಿಂತ, ಒಂದೇ ಕೌಶಲ್ಯವನ್ನು ಆಳವಾಗಿ ಅಭ್ಯಾಸ ಮಾಡಿದರೆ ನಿಜವಾದ ಪರಿಣತಿ ದೊರೆಯುತ್ತದೆ. ಒಂದೇ ಕೆಲಸವನ್ನು ಮತ್ತೆ ಮತ್ತೆ ಮಾಡುವುದರಿಂದ ನಿಖರತೆ, ಆತ್ಮವಿಶ್ವಾಸ ಮತ್ತು ಸಾಮರ್ಥ್ಯ ಹೆಚ್ಚಾಗುತ್ತವೆ. ವಿದ್ಯಾರ್ಥಿಗಳಿಗೂ ಇದು ಪ್ರಮುಖ ಪಾಠ. ಒಂದೇ ವಿಷಯವನ್ನು ಗಟ್ಟಿಯಾಗಿ ಅಭ್ಯಾಸ ಮಾಡಿದರೆ ಜ್ಞಾನ ದೃಢವಾಗುತ್ತದೆ. ಕ್ರೀಡೆ, ಓದು ಅಥವಾ ಜೀವನದ ಯಾವುದೇ ಕ್ಷೇತ್ರದಲ್ಲಿಯೂ ಸಹ ನಿರಂತರ ಪರಿಶ್ರಮ ಮತ್ತು ಸಹನೆಯಿಂದಲೇ ಶ್ರೇಷ್ಠತೆ ಸಾಧಿಸಬಹುದು ಎಂಬ ಪ್ರೇರಣೆಯನ್ನು ಈ ಮಾತು ನೀಡುತ್ತದೆ.

**- ಅಂತೋಣಿ ಮುತ್ತು ಶಿಕ್ಷಕರು, 7259675543**

## 5.40 ಲಕ್ಷ ರೂ. ಬೆಲೆಯ ಚಿನ್ನದ ಸರ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತವರು ಮನೆಯಲ್ಲಿ ಮಹಿಳೆಯ ಚಿನ್ನದ ಮಾಂಗಲ್ಯ ಸರ ನಾಪತ್ತೆಯಾಗಿದ್ದು ಅಣ್ಣನ ಹೆಂಡತಿ ಹಾಗೂ ಮಕ್ಕಳ ಮೇಲೆ ಸಂಶಯ ವ್ಯಕ್ತವಾಗಿದೆ. ಈ ಸಂಬಂಧ ನಗರ ಠಾಣೆಯಲ್ಲಿ ದೂರು ದಾಖಲಾಗಿದೆ.

ಬೆಂಗಳೂರಿನ ಬಿಟಿಎಂ ನಿವಾಸಿ ಸರಸ್ವತಿ ಎಂಬುವವರ 5.40 ಲಕ್ಷ ರೂ. ಮೌಲ್ಯದ ಸರ ಕಳುವಾಗಿದೆ. ಫೆ. 8ರ ಭಾನುವಾರ ನಗರದಲ್ಲಿ ವಾಸವಿರುವ ಸಹೋದರ ವೆಂಕಟೇಶ್ ಮನೆಗೆ ಬಂದಿದ್ದ ಅವರು ರಾತ್ರಿ ಮಲಗುವಾಗ ಮಾಂಗಲ್ಯ ಸರವನ್ನು ಬಿಚ್ಚಿಟ್ಟಿದ್ದರು.

# ಮಾದಿಗ ಸಮುದಾಯದ ಸಂಘಟನೆಗೆ ಸಚಿವ ಮುನಿಯಪ್ಪ ಕರೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾದಿಗ ಸಮಾಜದ ಸಂಘಟನೆ ಬಲಪಡಿಸಲು ಸದಸ್ಯತ್ವ ಅಭಿಯಾನಕ್ಕೆ ಒತ್ತು ನೀಡಿ ಯುವಕರು ಹಾಗು ಬಡ ಮಕ್ಕಳ ಶಿಕ್ಷಣಾಭಿವೃದ್ಧಿಗೆ ಶ್ರಮಿಸಬೇಕೆಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಹೆಚ್.ಮುನಿಯಪ್ಪ ಸಲಹೆ ನೀಡಿದರು. ನಗರದ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ಕರ್ನಾಟಕ ಮಾದರ ಮಹಾಸಭಾದಿಂದ ಹಮ್ಮಿಕೊಂಡಿದ್ದ ಮಾದರ ಮಹಾಸಭಾದ ದಾಖಲಾತಿ ಅಭಿಯಾನ ಹಾಗೂ ಸಮುದಾಯದ ಮುಖಂಡರೊಂದಿಗೆ ಸಮಾಲೋಚನೆ ಮತ್ತು ಮಾದಿಗರ ನೌಕರರ ಸಂಘ ಉದ್ಘಾಟನೆ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು.

ಬುದ್ಧ, ಬಸವ, ಅಂಬೇಡ್ಕರ್ ಅವರು ಸಮಾನತೆಗಾಗಿ ಹೋರಾಟ ನಡೆಸಿದ ಮಹನೀಯರು. ಅದೇ ದಾರಿಯಲ್ಲಿ ಸಂಘಟನೆಗಳು ಹಿಂದುಳಿದ ದಲಿತ ಮತ್ತು ಬಡ ಮಕ್ಕಳಿಗೆ ಸಹಾಯ ಮಾಡುವ ಉದ್ದೇಶದಿಂದ ಕಾರ್ಯನಿರ್ವಹಿಸಬೇಕು ಎಂದರು.

ಒಗ್ಗಟ್ಟಿನಲ್ಲಿ ಬಲವಿದೆ. ಸಮುದಾಯದ ಶಕ್ತಿಯನ್ನು ಸಂಘಟಿತವಾಗಿ ಪ್ರದರ್ಶಿಸಿದಾಗ ಮಾತ್ರ ಸಾಮಾಜಿಕ ಮತ್ತು ಶೈಕ್ಷಣಿಕ ಪ್ರಗತಿ ಸಾಧ್ಯ. ಮನಸ್ಸಿನಿಂದ ತತ್ವ ಹಾಗೂ ನ್ಯಾಯಬದ್ಧ ಕೆಲಸ ಮಾಡಿದರೆ ಸಮುದಾಯದ ಭವಿಷ್ಯ ಉಜ್ವಲವಾಗುತ್ತದೆ. ಯುವ ಜನರಲ್ಲಿ ವಿದ್ಯಾಭ್ಯಾಸದ ಚೈತನ್ಯ ಹೆಚ್ಚಿಸುವ ಕೆಲಸ ಸಂಘದ ಹೊಣೆಯೆಂದರು.

ಶಾಸಕ ಕೆ.ಎಂ.ಶಿವಲಿಗೇಗೌಡರ ನೇತೃತ್ವದಲ್ಲೇ ಜಿಲ್ಲೆಯಲ್ಲಿ 2028ರ ಚುನಾವಣೆ ನಡೆಸಲಾಗುವುದು. ಅವರ ನಾಯಕತ್ವ ಸದೃಢವಾಗಿದೆ. ಪಕ್ಷದ ಪರವಾಗಿ ಧೈರ್ಯವಾಗಿ ಮಾತನಾಡುವ ಕಲೆ ಅರಿಗೆ ಕರಗತವಾಗಿದೆಯೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಮಾತನಾಡಿ, ಮಾದಿಗ ಸಮುದಾಯದಿಂದ ಹೆಚ್ಚು ಬಾರಿ ಸಂಸದರಾಗಿರುವ ನಾಯಕ ಕೆ.ಹೆಚ್.ಮುನಿಯಪ್ಪ ಅವರು ಒಳ ಮೀಸಲಾತಿ, ಸಮಾನತೆ ಮತ್ತು ನ್ಯಾಯಕ್ಕಾಗಿ ಹೋರಾಡಿದ್ದಾರೆ. ದಲಿತರ ಹಕ್ಕು ಪಡೆಯಲು ಸಾಕಷ್ಟು ಶ್ರಮಿಸಿದ್ದಾರೆಂದರು. ಸಮುದಾಯದ ಆರ್ಥಿಕ ಪ್ರಗತಿಗೆ ಸಂಘಟನೆಗಳು ಗಮನ ಹರಿಸಬೇಕು. ಜಿಲ್ಲಾ ಪಂಚಾಯಿತಿ ಹಾಗು ತಾಲೂಕು ಪಂಚಾಯಿತಿ ಮಟ್ಟದಲ್ಲಿ ದಲಿತರಿಗೆ ಹೆಚ್ಚಿನ ಪ್ರತಿನಿಧಿತ್ವ ಸಿಗುವಂತೆ ಪ್ರಯತ್ನಿಸಲಾಗಿದೆ ಎಂದರು.

ಮಾದಿಗ ಸಮುದಾಯ ಜಿಲ್ಲಾಧ್ಯಕ್ಷ ವಿಜಯಕುಮಾರ್ ದಂಡೋರ ಮಾತನಾಡಿ, ಕಳೆದ ಹಲವು ದಶಕಗಳಿಂದ ಸಮುದಾಯದ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸಿದ ನಾಯಕತ್ವವನ್ನು ಬೆಂಬಲಿಸಬೇಕು. ಸಂಘದ ಸದಸ್ಯತ್ವ ಪಡೆದು ಯುವಕರನ್ನು ಬೆಳೆಸುವ ಕಾರ್ಯದಲ್ಲಿ ಎಲ್ಲರೂ ಭಾಗಿಯಾಗಬೇಕು. ವಿದ್ಯಾರ್ಥಿಗಳು, ನೌಕರರು ಹಾಗು ಸಾರ್ವಜನಿಕರು ಸಂಘಟನೆಗೆ ಬೆಂಬಲ ನೀಡಿದರೆ ಚಳವಳಿ ಜೀವಂತವಾಗಿರುತ್ತದೆಂದು ಹೇಳಿದರು.

ಮಾದಿಗ ದಂಡೋರ ಸಮಿತಿ ರಾಜ್ಯಾಧ್ಯಕ್ಷ ಮಂಜುನಾಥ, ಮಾಜಿ ಸಂಸದ ಚಂದ್ರಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯ ಧರ್ಮಸೇನಾ, ಶಿವಪ್ಪ, ಎಂ.ಆರ್.ವೆಂಕಟೇಶ್, ಸಿ.ಆರ್.ಮಂಜುನಾಥ್, ದೇವರಾಜು, ಮುನಿಸ್ವಾಮಿ, ಸತೀಶ್, ಚಂದ್ರಶೇಖರ್, ರವೀಶ್ ಬಸ್ಸಾಪುರ, ಶಿವಮೂರ್ತಿ ಮತ್ತಿತರರಿದ್ದರು.

# ಇಂದಿನಿಂದ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ

## ಫೆ. 20ಕ್ಕೆ ಹುಲಿ ವಾಹನ ಸೇವೆ | ಸುತ್ತಲಿನ ಏಳು ಬುಡಕಟ್ಟು ಗ್ರಾಮಸ್ಥರು ಭಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲೂಕಿನ ಪುರಾಣ ಪ್ರಸಿದ್ಧ ಪುರಾತನ ಗ್ರಾಮ ಮಾದಲಗೆರೆ ಶ್ರೀ ಮಹದೇಶ್ವರ ಸ್ವಾಮಿಯ 9ನೇ ವರ್ಷದ ಜಾತ್ರಾ ಮಹೋತ್ಸವ ಫೆ.15ರ ಭಾನುವಾರದಿಂದ ಫೆ.23ರ ವರೆಗೆ ನಡೆಯಲಿದೆ.

ಮಾದಲಗೆರೆ ಶ್ರೀ ಮಹದೇಶ್ವರ ಸ್ವಾಮಿ ದೇಗುಲವು ನಿಂಬೇಹಳ್ಳಿ, ಮಹದೇಶ್ವರ ಬಡಾವಣೆ, ಎಂ.ಕೆ.ಚಿಕ್ಕೆನಹಳ್ಳಿ, ಎಂ.ಕೆ.ಹೊಸೂರು, ಎಂ.ಕೆ.ರಂಗನಾಥಪುರ ಹಾಗೂ ಎಂ.ಕೆ. ಲಕ್ಷ್ಮೀಪುರ ಸೇರಿ ಏಳು ಬುಡಕಟ್ಟು ಗ್ರಾಮಗಳಿಗೆ ಒಳಪಡಲಿದೆ.

ಭಾನುವಾರ ಮುಂಜಾನೆ ದೇಗುಲಕ್ಕೆ ಬುಡಕಟ್ಟು ಗ್ರಾಮಸ್ಥರು ಹಸಿರು ಚಪ್ಪರ ಹಾಕಲಿದ್ದು ತಳಿರು ತೋರಣಗಳಿಂದ ಸಿಂಗರಿಸಲಿದ್ದಾರೆ. ವಿದ್ಯುತ್ ದೀಪಲಂಕಾರ ಮಾಡಲಿದ್ದು ಉತ್ಸವದ ಬೀದಿಯನ್ನು ಸ್ವಚ್ಛಗೊಳಿಸಿ ರಂಗೋಲಿ ಬಿಡಿಸಲಾಗುವುದು.

ಶ್ರೀ ಮಹದೇಶ್ವರಸ್ವಾಮಿ, ಶ್ರೀ ಶಂಭುಲಿಂಗೇಶ್ವರ ಸ್ವಾಮಿ ಹಾಗೂ ಶ್ರೀ ಸೋಮೇಶ್ವರ ಸ್ವಾಮಿ ದೇಗುಲಗಳಲ್ಲಿ ಪಂಚಾಮೃತ ಅಭಿಷೇಕ, ಜಾಗರಣೆ, ಮಹಾಶಿವರಾತ್ರಿ ವಿಶೇಷ ಪೂಜೆಗಳು ನೆರವೇರಲಿವೆ. ಮಹದೇಶ್ವರ ಬಡಾವಣೆಯ ಜಯಮ್ಮ ಕುಟುಂಬಸ್ಥರಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಫೆ.16 ಸೋಮವಾರ ಸಂಜೆ ಮಂಗಳವಾದ್ಯ ವೈಭವದೊಂದಿಗೆ ಮೂಲಸ್ಥಾನದ ಸನ್ನಿಧಿಗೆ ಶ್ರೀ ಸ್ವಾಮಿಯವರ ಆಗಮನ, ಗಂಗಾ ಪೂಜೆ, ಧ್ವಜಾರೋಹಣ, ಶ್ರೀ ಗಣಪತಿ ಪೂಜೆ, ಶ್ರೀ ಸ್ವಾಮಿಯವರಿಗೆ ಪಂಚಾಮೃತ ಅಭಿಷೇಕ ಹಾಗೂ ಸಂಜೆ 7 ಗಂಟೆಗೆ ಮಾದಲಗೆರೆ ವಸಂತಮ್ಮ ದೇವರಾಜು ಅವರಿಂದ ಅನ್ನದಾಸೋಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಫೆ. 17ರ ಮಂಗಳವಾರ ವಿಶೇಷ ಪೂಜೆ, ಫೆ.18 ಬುಧವಾರ ಎಂದಿನಂತೆ ಪೂಜಾ ಕೈಂಕರ್ಯಗಳ ಜೊತೆಗೆ ಭಕ್ತಾದಿಗಳಿಂದ ಶ್ರೀ ಮಹದೇಶ್ವರ ಸ್ವಾಮಿಯ ಹುಲಿವಾಹನ ಸೇವೆ ಜರುಗಲಿದ್ದು, ಸಂಜೆ 5 ಗಂಟೆಗೆ ಕುಂಭೇನಹಳ್ಳಿ ಕಪನಿಗೌಡರ ಸಾರಥ್ಯದಲ್ಲಿ ಕೋಲಾಟ ಕಾರ್ಯಕ್ರಮ ನಡೆಯಲಿದೆ. ನಂತರ ಎಂ.ಕೆ.ರಂಗನಾಥಪುರ ಗ್ರಾಮಸ್ಥರಿಂದ ಅನ್ನದಾಸೋಹ ಆಯೋಜಿಸಲಾಗಿದೆ.

ಫೆ.19 ಗುರುವಾರ ಬೆಳಿಗ್ಗೆ ಗಂಗಾ ಪೂಜೆ, ಪಂಚಾಮೃತ ಅಭಿಷೇಕ, ಮಹಾಮಂಗಳಾರತಿ, ಪ್ರಸಾದ ವಿನಿಯೋಗದ ನಂತರ ಹುಲಿವಾಹನ ಸೇವೆ ಜರುಗಲಿದ್ದು ರಾತ್ರಿ 8.30 ಗಂಟೆಗೆ ಸಂಗೀತ ರಸಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ. ನಂತರ ಎಂ.ಕೆ. ಹೊಸೂರು ಗ್ರಾಮಸ್ಥರಿಂದ ಅನ್ನದಾಸೋಹ ನಡೆಯಲಿದೆ.

ಫೆ.20ರ ಶುಕ್ರವಾರ ಎಂದಿನಂತೆ ವಿಶೇಷ ಪೂಜಾ ವಿಧಿ



ವಿಧಾನಗಳು, ಹುಲಿವಾಹನ ಸೇವೆ ಹಾಗೂ ಅನ್ನದಾಸೋಹ ನಡೆಯಲಿದೆ. ಫೆ.21 ಶನಿವಾರ ರಾತ್ರಿ 8.30 ಗಂಟೆಗೆ ಸಂಗೀತ ರಸ ಸಂಜೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಫೆ. 22 ಭಾನುವಾರ ವಿಶೇಷ ಪೂಜೆಯೊಂದಿಗೆ ಮಹದೇಶ್ವರ ಬಡಾವಣೆಯ ಗ್ರಾಮಸ್ಥರಿಂದ ಮದ್ದುಗುಂಡು ಚಕಮಕಿ, ವೀರಭದ್ರನ ಕುಣಿತ, ವಾದ್ಯ ವೈಭವಗಳೊಂದಿಗೆ ಶ್ರೀ ಸ್ವಾಮಿಯವರ ಉತ್ಸವ ಮತ್ತು ಮಧ್ಯಾಹ್ನ 1 ಗಂಟೆಗೆ ಅನ್ನದಾಸೋಹ ಏರ್ಪಡಿಸಲಾಗಿದೆ.

ಭಾನುವಾರ ಸಂಜೆ ಮಾದಲಗೆರೆ ಬಸವ ಗೆಳೆಯರ ಬಳಗದ ವತಿಯಿಂದ ಮೂರನೇ ವರ್ಷದ ಅದ್ದೂರಿ ಶ್ವಾನ ಓಟದ ಸ್ಪರ್ಧೆ ಏರ್ಪಡಿಸಲಾಗಿದ್ದು 8 ಬಹುಮಾನಗಳ ಜೊತೆಗೆ ವಿಜೇತ ಶ್ವಾನಗಳಿಗೆ ಆಕರ್ಷಕ ಟ್ರೋಫಿ ವಿತರಿಸಲಾಗುವುದು ಎಂದು ಸಮಿತಿ ಹೇಳಿದೆ.

### ಜಾತ್ರೆ ನಿಮಿತ್ತ ಆರೋಗ್ಯ ಶಿಬಿರ

ಚನ್ನರಾಯಪಟ್ಟಣದ ಸ್ವಯಂ ಪ್ರೇರಿತ ರಕ್ತ ಕೇಂದ್ರ, ಹಾಸನದ ಅಮ್ಮ ಕಣ್ಣಿನ ಆಸ್ಪತ್ರೆ ಹಾಗೂ ನ್ಯೂ ಸ್ಪರ್ಶ ಲೈಫ್ ಲೈನ್ ಆಸ್ಪತ್ರೆ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣೆ ಮತ್ತು ಬೃಹತ್ ರಕ್ತದಾನ ಶಿಬಿರ ಹಾಗೂ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದ್ದು ಮಧುಮೇಹ, ರಕ್ತದೊತ್ತಡ, ದೃಷ್ಟಿದೋಷ, ಹೃದಯ ಸಂಬಂಧಿ ಸಮಸ್ಯೆಗಳು ಹಾಗೂ ಇತರೆ ಕಾಯಿಲೆಗಳಿಗೆ ವೈದ್ಯಕೀಯ ಪರೀಕ್ಷೆ ನಡೆಯಲಿದೆ.

ಫೆ. 23 ಸೋಮವಾರ ವಿವಿಧ ವಿಶೇಷ ಪೂಜಾ ಕೈಗಳು ನೆರವೇರಲಿದ್ದು ಶ್ರೀ ಮಹದೇಶ್ವರ ಸ್ವಾಮಿಯವರ ಹುಲಿವಾಹನ ಸೇವೆ ನಡೆಯಲಿದೆ. ಸಂಜೆ 7 ಗಂಟೆಗೆ ನಿಂಬೇಹಳ್ಳಿ ಗ್ರಾಮಕ್ಕೆ ಶ್ರೀ ಸ್ವಾಮಿಯವರ ಪ್ರವೇಶದೊಂದಿಗೆ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ. ಸುತ್ತಮುತ್ತಲ ಗ್ರಾಮಸ್ಥರು ಸ್ವಾಮಿಯ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಕೃಪೆಗೆ ಪಾತ್ರರಾಗಬೇಕು ಎಂದು ಜಾತ್ರಾ ಸಮಿತಿ ಕೋರಿದೆ.



## ಬೈಕ್ ಅಪಘಾತದಲ್ಲಿ ವ್ಯಕ್ತಿ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಿಯಂತ್ರಣ ತಪ್ಪಿ ಬೈಕ್ ಮೇಲಿಂದ ಬಿದ್ದ ವ್ಯಕ್ತಿ ಸವಾರ ಮೃತಪಟ್ಟಿರುವ ಘಟನೆ ಕೊಕ್ಕನಘಟ್ಟ ಸಮೀಪ ನಡೆದಿದೆ.

ತಾಲೂಕಿನ ಚೌಡುವಳ್ಳಿ/ಶೆಟ್ಟಿಹಳ್ಳಿ ಪಿಎಸಿಸಿಎಸ್ ಕಾರ್ಯದರ್ಶಿ, ಕಟ್ಟಾಯ ಹೋಬಳಿ ಚೌಡೇನಹಳ್ಳಿ ಗ್ರಾಮದ ಜಯರಾಮ್ (51) ಮೃತರು. ಫೆ. 11ರಂದು ಕರ್ತವ್ಯ ಮುಗಿಸಿ ರಾತ್ರಿ 8ರ ಸಮಯದಲ್ಲಿ ಮನೆಗೆ ಹೋಗುತ್ತಿದ್ದಾಗ ಆಯತಪ್ಪಿ ರಸ್ತೆ ಮೇಲೆ ಬಿದ್ದಿದ್ದಾರೆ. ಕೂಡಲೇ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಇತಿಹಾಸದಲ್ಲಿ ಈ ದಿನ

### ಫೆಬ್ರವರಿ-15

**1898:** ಕ್ಯೂಬಾದ ಹವಾನಾ ಬಂದರಿನಲ್ಲಿ ಅಮೇರಿಕದ ಯುದ್ಧನೌಕೆ ಸ್ಫೋಟಗೊಂಡು ಮುಳುಗಿತು. ಈ ಘಟನೆ ಅಮೆರಿಕಾ-ಸ್ಪೇನ್ ಯುದ್ಧಕ್ಕೆ ಪ್ರಮುಖ ಕಾರಣವಾಯಿತು.

**1942:** ದ್ವಿತೀಯ ವಿಶ್ವಯುದ್ಧದ ವೇಳೆ ಬ್ರಿಟಿಷರ ನಿಯಂತ್ರಣದಲ್ಲಿದ್ದ ನಗರ ಜಪಾನ್ ಸೇನೆಯ ವಶಕ್ಕೆ ಸೇರಿತು.

**2003:** ಇರಾಕ್ ಯುದ್ಧದ ವಿರುದ್ಧ ವಿಶ್ವದ ಅನೇಕ ದೇಶಗಳಲ್ಲಿ ಭಾರೀ ಯುದ್ಧ ವಿರೋಧಿ ಪ್ರತಿಭಟನೆಗಳು ನಡೆದವು.

**ಜನನ**

**1564:** ಪ್ರಸಿದ್ಧ ವಿಜ್ಞಾನಿ Galileo Galilei ಜನಿಸಿದರು. ಅವರು ಆಧುನಿಕ ಖಗೋಳಶಾಸ್ತ್ರದ ಪಿತಾಮಹ

**1820:** ಅಮೇರಿಕದ ಮಹಿಳಾ ಹಕ್ಕುಗಳ ಹೋರಾಟಗಾರ್ತಿ Susan B. Anthony

**ಮರಣ**

**1965:** ಖ್ಯಾತ ಅಮೆರಿಕನ್ ಗಾಯಕ Nat King Cole

# ಬಿಜೆಪಿ ರಾಜ್ಯಾಧ್ಯಕ್ಷರಿಗೆ ಕಾರ್ಯಕರ್ತನ ಬಹಿರಂಗ ಪತ್ರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಮಾನ್ಯರೇ ನಾನು ಹಾಸನ ಜಿಲ್ಲೆಯೊಬ್ಬ ಸಾಮಾನ್ಯ ಬಿಜೆಪಿ ಕಾರ್ಯಕರ್ತನಾಗಿ ಈ ಪತ್ರವನ್ನು ಅತ್ಯಂತ ನೋವು, ಆಕ್ರೋಶ ಮತ್ತು ನಿರಾಶೆಯೊಂದಿಗೆ ಬರೆಯುತ್ತಿದ್ದೇನೆ. ಜಿಲ್ಲೆಯಲ್ಲಿ ಇತ್ತೀಚೆಗೆ ನಡೆಯುತ್ತಿರುವ ಘಟನೆಗಳು, ಬಿಜೆಪಿ ತನ್ನ ಮೂಲ ಸಿದ್ಧಾಂತಗಳಾದ ಹಿಂದುತ್ವ, ರಾಷ್ಟ್ರಭಕ್ತಿ ಮತ್ತು ಧೈರ್ಯಶಾಲಿ ರಾಜಕಾರಣದಿಂದ ದೂರ ಸರಿದಿದೆಯೇ ಎಂಬ ಗಂಭೀರ ಪ್ರಶ್ನೆಯನ್ನು ಹುಟ್ಟಿಸುತ್ತಿವೆ.

ವಿಶ್ವ ಹಿಂದು ಪರಿಷತ್ತಿನ ಶರಣ್ ಪಂಪ್‌ವೆಲ್ ಹಾಸನದಲ್ಲಿ ನಡೆಯಬೇಕಿದ್ದ ಕಾರ್ಯಕ್ರಮಕ್ಕೆ ಪೊಲೀಸ್ ಇಲಾಖೆ ತಡೆ ನೀಡಿದ ಸಂದರ್ಭದಲ್ಲಿ, ಹಾಸನ ಜಿಲ್ಲೆಯ ಒಬ್ಬನೇ ಒಬ್ಬ ಬಿಜೆಪಿ ನಾಯಕರೂ ಸಾರ್ವಜನಿಕವಾಗಿ ತುಟಿ ಬಿಚ್ಚಲಿಲ್ಲ. ಹಿಂದು ಸಂಘಟನೆಗೆ ನಡೆದ ಅನ್ಯಾಯದ ವಿರುದ್ಧ ಧ್ವನಿ ಎತ್ತಬೇಕಾದ ನಮ್ಮದೇ ಪಕ್ಷದ ನಾಯಕರು ಮೌನ ವಹಿಸಿದ್ದು, ಇದು ಕೇವಲ ನಿರ್ಲಕ್ಷ್ಯವಲ್ಲ, ಹಿಂದು ಸಮಾಜಕ್ಕೆ ಮಾಡಿದ ದ್ರೋಹವೆಂದೇ ಕಾರ್ಯಕರ್ತರು ಭಾವಿಸುತ್ತಿದ್ದಾರೆ. ಹಿಂದು ಸಂಘಟನೆಗಳ ವಿಚಾರದಲ್ಲಿ ಪಕ್ಷ ಸ್ಪಷ್ಟವಾಗಿ ನಿಲ್ಲುತ್ತಿಲ್ಲ ಎಂಬ ಭಾವನೆ ಮೂಡಿದೆ.

ಅದೇ ರೀತಿಯಾಗಿ, ಅಕ್ರಮ ಬಾಂಗ್ಲಾದೇಶಿ ವಲಸಿಗರನ್ನು ಪತ್ತೆಹಚ್ಚುವ ಉದ್ದೇಶದಿಂದ ತೆರಳಿದ ಪುನೀತ್ ಕೆರೆಹಳ್ಳಿ ಅವರನ್ನು ಪೊಲೀಸರು ಬಂಧಿಸಿದ ಸಂದರ್ಭದಲ್ಲಿ ಅಪರಾಧಿಗಳನ್ನು ರಕ್ಷಿಸುವಂತೆ ಮತ್ತು ಸತ್ಯವನ್ನು ಪ್ರಶ್ನಿಸಿದವರನ್ನೇ ಶಿಕ್ಷಿಸುವಂತೆ ವ್ಯವಸ್ಥೆ ನಡೆದುಕೊಂಡರೂ, ಜಿಲ್ಲೆಯ ಬಿಜೆಪಿ ನಾಯಕರು ಸಂಪೂರ್ಣ ಮೌನ ವಹಿಸಿದರು. ಅಕ್ರಮ ವಲಸೆ ಎಂಬುದು ರಾಷ್ಟ್ರ ಭದ್ರತೆಗೆ ಸಂಬಂಧಿಸಿದ ಗಂಭೀರ ವಿಷಯವಾಗಿದ್ದರೂ, ನಮ್ಮ ಜಿಲ್ಲೆಯಿಂದ ಯಾವುದೇ ಬಲವಾದ ಪ್ರತಿಕ್ರಿಯೆ ಕಾಣಿಸದಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿಯಾಗಿದೆ. ಅಕ್ರಮ ವಲಸೆ ಎಂಬ ರಾಷ್ಟ್ರ ಭದ್ರತೆಗೆ ಸಂಬಂಧಿಸಿದ ವಿಷಯದಲ್ಲಿ ಪಕ್ಷದ ಧ್ವನಿ ದುರ್ಬಲವಾಗಿದೆ ಎಂಬ ಅಭಿಪ್ರಾಯ ಕಾರ್ಯಕರ್ತರಲ್ಲಿ ಮೂಡಿದೆ.

ಪಕ್ಕದ ಜಿಲ್ಲೆಗಳಲ್ಲಿ ನಡೆದ ಹಿಂದು ಸಮಾಜೋತ್ಸವಗಳು ಜನಸಾಗರದೊಂದಿಗೆ, ನಾಯಕತ್ವದ ಸ್ಪಷ್ಟ ಬೆಂಬಲದೊಂದಿಗೆ ಯಶಸ್ವಿಯಾಗಿ ನಡೆದಿರುವಾಗ, ಹಾಸನ ಜಿಲ್ಲೆಯ ಹಿಂದು ಸಮಾಜೋತ್ಸವ ಮಾತ್ರ ಸಪ್ಪೆ ಎನ್ನುವ ಭಾವನೆಯನ್ನು ಜನರಲ್ಲಿ



ಮೂಡಿಸಿದೆ. ಇದಕ್ಕೆ ಪ್ರಮುಖ ಕಾರಣ ಜಿಲ್ಲೆಯ ಯಾವುದೇ ಪ್ರಭಾವಿ ಬಿಜೆಪಿ ನಾಯಕರು ಕಾರ್ಯಕ್ರಮಕ್ಕೆ ಬೆಂಬಲ ನೀಡದೇ, ಭಾಗವಹಿಸದೇ, ಹಿಂದೂ ಸಮಾಜದ ಪಕ್ಕದಲ್ಲಿ ನಿಲ್ಲದೇ ಇರುವುದು. ಎಲ್ಲರೂ ಮೈತ್ರಿ ರಾಜಕಾರಣದ ಬಗ್ಗೆ ಮಾತನಾಡಿದರೇ ಹೊರತು, ಹಿಂದು ಸಮಾಜೋತ್ಸವದ ಬಗ್ಗೆ ಮಾತನಾಡಲಿಲ್ಲ, ನಿಂತಿಲ್ಲ, ಹೋರಾಡಲಿಲ್ಲ.

ಇನ್ನೂ ಗಂಭೀರವಾದ ಸಂಗತಿಯೆಂದರೆ, ಜಿಲ್ಲೆಯಲ್ಲಿ ರಾಜಕೀಯ ಹೋರಾಟಗಳು ಸಂಪೂರ್ಣವಾಗಿ ಮೈತ್ರಿ ಪಕ್ಷ ಜೆಡಿಎಸ್ ವಿರುದ್ಧ ಮಾತ್ರ ಸೀಮಿತವಾಗಿವೆ. ಕಾಂಗ್ರೆಸ್ ಪಕ್ಷದ ವಿರುದ್ಧ, ಮುಸ್ಲಿಂ ದೌರ್ಜನ್ಯ, ಅಕ್ರಮ ಬಾಂಗ್ಲಾದೇಶಿ ವಲಸಿಗರ ಪುಂಡಾಟಿಕೆ, ಹಿಂದುಗಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಉಗ್ರ ಪ್ರತಿಭಟನೆಗಳು, ಸ್ಪಷ್ಟ ಹೇಳಿಕೆಗಳು, ಬೀದಿ ಹೋರಾಟಗಳು ಯಾವುದೂ ಕಾಣುತ್ತಿಲ್ಲ. ಬಿಜೆಪಿ ನಾಯಕರು ಜೆಡಿಎಸ್ ವಿರುದ್ಧ ಮಾತನಾಡುವುದರಲ್ಲಿ ಶೂರರಾಗಿದ್ದು, ಕಾಂಗ್ರೆಸ್ ವಿರುದ್ಧ ಮಾತನಾಡುವಾಗ ಮೌನಿಯಾಗುತ್ತಿರುವುದು ಜನರಲ್ಲಿ ಗಂಭೀರ ಅನುಮಾನಗಳಿಗೆ ಕಾರಣವಾಗಿದೆ. ಮಾನ್ಯರೇ, ಹಾಸನ ಜಿಲ್ಲೆಯಲ್ಲಿ ಬಿಜೆಪಿ ನಾಯಕರು ತಮ್ಮ ಕರ್ತವ್ಯ ಮರೆತಿರುವರೇ? ಹಿಂದು ಸಮಾಜದ ಪರವಾಗಿ ನಿಲ್ಲುವ ಧೈರ್ಯ ಕಳೆದುಕೊಂಡಿರುವರೇ? ಅಥವಾ ಅಧಿಕಾರ, ಹೊಂದಾಣಿಕೆ ಮತ್ತು ರಾಜಕೀಯ ಲೆಕ್ಕಾಚಾರಗಳೇ ಹಿಂದುತ್ವಕ್ಕಿಂತ ದೊಡ್ಡದಾಗಿದೆಯೇ?

ಈ ಪ್ರಶ್ನೆಗಳು ಇಂದು ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತನ ಮನಸ್ಸಿನಲ್ಲಿ ಕಾಡುತ್ತಿವೆ. ನೀವು ದಯವಿಟ್ಟು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಹಾಸನ ಜಿಲ್ಲೆಯ ಬಿಜೆಪಿ ನಾಯಕತ್ವಕ್ಕೆ ಅವರ ಜವಾಬ್ದಾರಿಗಳು ಮತ್ತು ಕರ್ತವ್ಯಗಳನ್ನು ಕಟ್ಟುನಿಟ್ಟಾಗಿ ಮನವರಿಕೆ ಮಾಡಿಕೊಡಬೇಕೆಂದು ನಾವು ಆಗ್ರಹಿಸುತ್ತೇವೆ. ಹಿಂದು ಸಮಾಜದ ವಿಚಾರದಲ್ಲಿ ಮೌನ ವಹಿಸುವ ನಾಯಕರಿಗೆ ಸ್ಪಷ್ಟ ಸೂಚನೆ, ಅಗತ್ಯವಿದ್ದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂಬುದು ಕಾರ್ಯಕರ್ತರ ಒತ್ತಾಯವಾಗಿದೆ. ಪಕ್ಷದ ಮೂಲ ಸಿದ್ಧಾಂತಗಳಾದ ಹಿಂದುತ್ವ ಮತ್ತು ರಾಷ್ಟ್ರಭದ್ರತೆ ವಿಷಯಗಳಲ್ಲಿ ಸ್ಪಷ್ಟ ನಾಯಕತ್ವದ ಕೊರತೆ ಅನ್ನಿಸುತ್ತದೆ.

ಜಿಲ್ಲಾ ನಾಯಕತ್ವ ಹೆಚ್ಚು ರಾಜಕೀಯ ಹೊಂದಾಣಿಕೆಗಳ ಮೇಲೆ ಗಮನ ಹರಿಸುತ್ತಿದ್ದು, ವಿಚಾರಾಧಾರಿತ ಹೋರಾಟಗಳಲ್ಲಿ ಹಿಂದೆ ಸರಿದಿದೆ ಎಂಬ ಭಾವನೆ ಇದೆ. ಕಾರ್ಯಕರ್ತರಲ್ಲಿ ಉತ್ಸಾಹ ಕುಂಠಿತವಾಗುತ್ತಿರುವ ಲಕ್ಷಣಗಳು ಕಂಡುಬರುತ್ತಿವೆ. ಹಿಂದು ಸಂಘಟನೆಗಳು ಮತ್ತು ಸಮಾಜೋತ್ಸವಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಜಿಲ್ಲಾ ನಾಯಕತ್ವದಿಂದ ಸ್ಪಷ್ಟ ಮತ್ತು ಸಮಯೋಚಿತ ಪ್ರತಿಕ್ರಿಯೆ ಅಗತ್ಯ. ಅಕ್ರಮ ವಲಸೆ ಹಾಗೂ ಸಾಮಾಜಿಕ ಭದ್ರತೆ ವಿಷಯಗಳಲ್ಲಿ ಪಕ್ಷದ ನಿಲುವು ಜಿಲ್ಲಾಮಟ್ಟದಲ್ಲಿ ಬಲವಾಗಿ ವ್ಯಕ್ತವಾಗಬೇಕು. ಜಿಲ್ಲಾ ನಾಯಕರಿಗೆ ಸಿದ್ಧಾಂತಾಧಾರಿತ ರಾಜಕಾರಣ ಮತ್ತು ಸಂಘಟನಾ ಜವಾಬ್ದಾರಿಗಳ ಬಗ್ಗೆ ರಾಜ್ಯ ಮಟ್ಟದಿಂದ ಮಾರ್ಗದರ್ಶನ ನೀಡುವುದು ಒಳಿತು. ಕಾರ್ಯಕರ್ತರೊಂದಿಗೆ ನೇರ ಸಂವಾದ ನಡೆಸಿ ಅವರ ಆತಂಕಗಳನ್ನು ನಿವಾರಿಸುವ ಕ್ರಮ ಕೈಗೊಳ್ಳಬೇಕು. ಈ ವರದಿ ಟೀಕೆಯ ಉದ್ದೇಶದಿಂದಲ್ಲ, ಆದರೆ ಹಾಸನ ಜಿಲ್ಲೆಯಲ್ಲಿ ಪಕ್ಷದ ಸಂಘಟನಾ ಬಲ, ಸಿದ್ಧಾಂತಾತ್ಮಕ ಸ್ಪಷ್ಟತೆ ಮತ್ತು ವಿಶ್ವಾಸವನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ ಸಲ್ಲಿಸಲಾಗುತ್ತಿದೆ. ರಾಜ್ಯ ನಾಯಕತ್ವದ ಸೂಕ್ತ ಮಾರ್ಗದರ್ಶನದಿಂದ ಪರಿಸ್ಥಿತಿಯನ್ನು ಸುಧಾರಿಸಬಹುದು ಎಂಬ ವಿಶ್ವಾಸವಿದೆ. ಹಾಸನ ಜಿಲ್ಲೆಯಲ್ಲಿ ಬಿಜೆಪಿ ಮತ್ತೆ ಹಿಂದು ಸಮಾಜದ ಧ್ವನಿಯಾಗಿ, ಹೋರಾಟದ ಪಕ್ಷವಾಗಿ ಕಾಣಿಸಿಕೊಳ್ಳಬೇಕೆಂದರೆ, ನಿಮ್ಮ ತಕ್ಷಣದ ಮತ್ತು ದೃಢ ಹಸ್ತಕ್ಷೇಪ ಅನಿವಾರ್ಯವಾಗಿದೆ. ಇದು ಕೇವಲ ಮನವಿಯಲ್ಲ, ಹಾಸನ ಜಿಲ್ಲೆಯ ಸಾವಿರಾರು ಕಾರ್ಯಕರ್ತರ ಆಕ್ರೋಶದ ಧ್ವನಿಯಾಗಿದೆ.

**- ಎಸ್.ಕೆ. ವೇಣುಗೋಪಾಲ್, ಬಿಜೆಪಿ ಕಾರ್ಯಕರ್ತ**

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248